

ನಾನು, ಪ್ರೊ. ಅಬ್ದುಲ್ ಮಜೀದ್ ಖಾನ್ ಮತ್ತು ರಮೇಶ್ ವುಡ್‌ಲ್ಯಾಂಡ್ಸ್‌ಗೆ ಹೋದೆವು. ವುಡ್‌ಲ್ಯಾಂಡ್ಸ್ ಮೊದಲಿನಿಂದಲೂ ನಮಗೆ ಪರಿಚಿತವಾಗಿದ್ದ ಸ್ಥಳ; ಹೋಟೆಲ್ ಒಡೆಯ ಉಚ್ಚಿಲ ಗುಂಡಣ್ಣ ನಮ್ಮ ಮಿತ್ರ. ಗುಂಡಣ್ಣ ಮತ್ತು ಅವರ ಸಿಬ್ಬಂದಿಯಿಂದ ನಮಗೆ ಸಿಕ್ಕ ಆದರವನ್ನು, ಆಪ್ತತೆಯನ್ನು ಕಣ್ಣಾರೆ ಕಂಡ ಗೌಡರಿಬ್ಬರಿಗೂ ಸಂತೋಷವಾಗಿತ್ತು. ಗುಂಡಣ್ಣನ ಜೊತೆಗಿನ ನಮ್ಮ ಈ ಸಂಪರ್ಕ ಗೌಡರಿಗೆ ತಿಳಿದಿರಲಿಲ್ಲ. ನಮಗೆ ಹರ್ಷದ ಜೊತೆಗೆ ಹರ್ಷ.

ಸೋನಕ್ಕ, ಗೋಪಾಲಗೌಡರ ಜೊತೆಗೆ ಗುರಪ್ಪ ಗೌಡರು ನಮಗಾಗಿ ಕಾಯುತ್ತಿದ್ದರು. ನಮ್ಮನ್ನು ಬರಮಾಡಿಕೊಂಡು, ನೇರವಾಗಿ ತಮ್ಮ ಕಾಟೇಜ್‌ಗೆ ಕರೆದುಕೊಂಡು ಹೋದರು. ಗುರಪ್ಪ ಗೌಡರದು ಎತ್ತರದ ನಿಲುವು, ಬಿಳಿ ಅಂಗಿ, ಕರಿಯ ಕೋಟು, ಹೆಗಲ ಮೇಲೆ ಬಿಳಿಯ ರೇಶಿಮೆ ಸೆಲ್ಲೆ. ಮುಖದ ತುಂಬ ತೃಪ್ತಿಯ ದೇವನಗೆ. ಗೋಪಾಲಗೌಡರದು ಎಂದಿನಂತೆ ಸಾದಾ ಸರಳ ನಡೆ, ಬಿಳಿಯ ಖಾದಿ ಜುಬ್ಬಾ, ಧೋತರ, ಕರಿಯ ಕೋಟು, ಕನ್ನಡಕ, ಸದಾ ತಿಳಿ ಹಾಸ್ಯ. ಸ್ವಲ್ಪ ಹೊತ್ತು ಕುಳಿತೆವು. ಗೋಪಾಲಗೌಡರು ರತ್ನಮ್ಮನವರನ್ನು ಪರಿಚಯಿಸಿದರು. ಅವರ ಮುಖದಲ್ಲಿ ರಾಜಮನೆತನದ ಗಾಂಭೀರ್ಯಯುಕ್ತ ಮೆಲುನಗೆ. ಅವರ ಸಂಗಡ ಸ್ವಲ್ಪ ವಯಸ್ಸಾಗಿದ್ದ ಇನ್ನೊಬ್ಬ ಮಹಿಳೆ. ಬಹುಶಃ ಒಬ್ಬ ಸೇವಕಿಯೂ ಜೊತೆಗಿದ್ದರು.

ಮಾತಾಡುತ್ತಲೇ ನಾವೆಲ್ಲರೂ, ಈಗಾಗಲೇ ಬುಕ್ ಆಗಿದ್ದ, ಸಿಂಗರಿಸಲಾಗಿದ್ದ, ಕೌಂಟರ್ ಬಲಭಾಗದಲ್ಲಿದ್ದ ದೊಡ್ಡ ಸಭಾಂಗಣಕ್ಕೆ ಬಂದೆವು. ಅಲ್ಲಿಯ ವ್ಯವಸ್ಥೆಯಲ್ಲಿ ಇರಬೇಕಿದ್ದ ಎಲ್ಲವೂ ಇತ್ತು. ಡಾ. ವಿಷ್ಣುಮೂರ್ತಿ ಕೆಎಂಸಿಯ ಅನೇಕ ಕಾರ್ಯಕ್ರಮಗಳಲ್ಲಿ, ಬಹುಶಃ, ಈ ಹೋಟಲಿನಲ್ಲಿಯೇ, ಇಂಥ ಶಿಸ್ತನ್ನು ಆಯೋಜಿಸಿದ್ದವರು. ಟೇಬಲ್‌ನ ಆಚೆ ಈಚೆ, ಮುಖಾಮುಖಿ ಕುಳಿತಿದ್ದ ಶಶಿರೇಖಾ ಮತ್ತು ವಿಷ್ಣುಮೂರ್ತಿ ಹೆಚ್ಚು ಮಾತನಾಡಲಿಲ್ಲ. ಸ್ವಲ್ಪ ಎತ್ತರದ ನಿಲುವಿನ ಹುಡುಗಿ ಮೌನಮೂರ್ತಿ, ಗಂಭೀರವದನೆ. ಬಹುಮೂಲ್ಯ ವಸ್ತ್ರ. ಸಾದಾ ಬುಶ್ ಶರ್ಟ್ ಧರಿಸಿದ್ದ ನಮ್ಮ ಮೂರ್ತಿಗೆ ಮಾತಿಗೆ ನೆರವಾದವರು ಅಬ್ದುಲ್ ಮಜೀದ್ ಖಾನ್‌ರು, ಗೋಪಾಲಗೌಡರು, ಅವರೊಂದಿಗೆ ಗುರಪ್ಪಗೌಡರು. ಎರಡೂ ಪಕ್ಷದವರಿಗೆ ಬಹುಪಾಲು ಎಲ್ಲ ತಿಳಿದಿದ್ದರಿಂದ ಅವರಾರೂ ಹೆಚ್ಚು ಮಾತಾಡಲಿಲ್ಲ. ತಿಂಡಿ ಮುಗಿದ ನಂತರ ಮತ್ತೆ ಕಾಟೇಜ್‌ಗೆ, ನಂತರ ಅದರ ಪಕ್ಕದಲ್ಲೇ ಇದ್ದ ಗೋಪಾಲಗೌಡರ ಕಾಟೇಜ್‌ಗೆ. ಇಷ್ಟದ, ನಿರ್ಣಯದ ಯಾವ ಮಾತನ್ನೂ ಯಾರೂ ಆಡಲಿಲ್ಲ; ವಿಷ್ಣುಮೂರ್ತಿ, ನಾವು ನಮ್ಮ ಸಂಪೂರ್ಣ ವಿಶ್ವಾಸವನ್ನು ಗೌಡರಲ್ಲಿ ಕಾದಿರಿಸಿ, ನಮಗಿಂತ ಎಲ್ಲವನ್ನೂ ಹೆಚ್ಚು ತಿಳಿದ ಅವರನ್ನು ಸಾಕ್ಷೀಭೂತಗೊಳಿಸಿದೆವು. ಗುರಪ್ಪಗೌಡರೂ, ರತ್ನಮ್ಮನವರೂ ಅಲ್ಲಿಯೇ ಬಂದು ಕುಳಿತರು. ಶಶಿರೇಖಾ ಜೊತೆ ಮಾತಾಡಲು ವಿಷ್ಣುಮೂರ್ತಿ ಬಯಸಿದರೆ, ತಮ್ಮ ಕಾಟೇಜ್‌ಗೆ ಹೋಗಲಿ ಎಂದು ಸೂಚಿಸಿದರು. ಆದರೆ ಮೂರ್ತಿ, ಅದೆಲ್ಲ ಅಗತ್ಯವಿಲ್ಲ ಎಂದರು. ಮಧ್ಯಾಹ್ನದ ಊಟದ ಆಮಂತ್ರಣವನ್ನು ನಯವಾಗಿಯೇ ನಿರಾಕರಿಸಿ, ನಾವು ಅವರ ಕಾರಿನಲ್ಲಿ ಕೆಎಂಸಿ ಕಡೆ ಮರಳಿದೆವು.

4

ವಿಷ್ಣುಮೂರ್ತಿಗೆ ಗೋಪಾಲಗೌಡರ ಬಗ್ಗೆ ಅಪಾರ ನಂಬಿಕೆ. ಆದರೆ ತಮ್ಮ ಮದುವೆಯ ಬಗೆಗೆ ಇನ್ನೂ ಯಾವುದೇ ನಿರ್ಧಾರಕ್ಕೆ ಬಂದಿರದಿದ್ದ ಅವರು ಹೆಚ್ಚು ತಲೆ